# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/2577/2021**
**ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:20/04/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

*ವಿಷಯ:* ಸರ್ಕಾರಿ ನೌಕರರಾದ **(1) ಶ್ರೀ. ಎಮ್. ಆರ್. ಪ್ರಕಾಶ, ಬಿನ್ ದಿ: ರುದ್ರಪ್ಪ, ಕಾರ್ಯ ನಿರ್ವಾಹಣಾಧಿಕಾರಿಗಳು, ಚಳ್ಳಕೆರೆ ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಜಿಲ್ಲೆ: (2) ಶ್ರೀ. ಎಸ್. ಬಸವರಾಜು, ಬಿನ್ ದಿ: ಎಮ್. ಶಂಕರಪ್ಪ, ಪಿಡಿಓ, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ, ಇವರು ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಚಿತ್ರದುರ್ಗ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **(1) ಶ್ರೀ. ಎಮ್. ಆರ್. ಪ್ರಕಾಶ, ಬಿನ್ ದಿ: ರುದ್ರಪ್ಪ, ಕಾರ್ಯ ನಿರ್ವಾಹಣಾಧಿಕಾರಿಗಳು, ಚಳ್ಳಕೆರೆ ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಜಿಲ್ಲೆ: (2) ಶ್ರೀ. ಎಸ್. ಬಸವರಾಜು, ಬಿನ್ ದಿ: ಎಮ್. ಶಂಕರಪ್ಪ, ಪಿಡಿಓ, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ: ಮತ್ತು (3) ಶ್ರೀ. ತಿಮ್ಮಾರೆಡ್ಡಿ, ಬಿನ್ ಅಂಜಿನಪ್ಪ, ಪ್ರಭಾರ ಪಿಡಿಓ, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ: ಹಾಲಿ ಕರ್ತವ್ಯ: ದೊಡ್ಡಚೆಲ್ಲೂರು, ಪರಶುರಾಂಪುರ ಹೋಬಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ:** (ಇನ್ನು ಮುಂದೆ ಎದುರುದಾರರುಗಳು ಎಂದು ಕರೆಯಲ್ಪಡುತ್ತಾರೆ), ಆದ ಇವರು **ಶ್ರೀ. ಆರ್. ರಾಜು, ಬಿನ್ ರಾಮಣ್ಣ, ಗುತ್ತಿಗೆದಾರರು, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ:** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. **ಚಿತ್ರದುರ್ಗ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ: 01/2016** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದಿನಾಂಕ: 20/08/2015 ರಂದು ಹಾಗೂ 06/01/2016ರಂದು ಒಟ್ಟು 110–ನಾಮಫಲಕಗಳನ್ನು ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಕಾಮಗಾರಿಗಳ ಹೆಸರುಗಳನ್ನು ನಮೂದಿಸುವುದಕ್ಕಾಗಿ, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ ಪಿಡಿಓರವರು ಹೇಳಿದ ಮೇರೆಗೆ ದೂರುದಾರರು ಸದರಿ ನಾಮಫಲಕಗಳನ್ನು ಸರಬರಾಜು ಮಾಡಿದ್ದು, 2ನೇ ಎದುರುದಾರರು ಡೆಲಿವರಿ ಚಲನ್ ಮೇಲೆ ಸಾಮಗ್ರಿಗಳು ಮುಟ್ಟಿದ ಬಗ್ಗೆ ಸಹಿ ಮಾಡಿ ನೀಡಿರುತ್ತಾರೆ. ಸರಬರಾಜು ಮಾಡಿದ ನಾಮಫಲಕಗಳಿಗೆ ಹಣ ಪಾವತಿಸುವಂತೆ 2ನೇ ಎದುರುದಾರರಿಗೆ ವಿಚಾರಿಸಿದಾಗ, ಅವರು 110–ನಾಮಫಲಕಗಳ ಹಣದಲ್ಲಿ 55–ನಾಮಫಲಕಗಳ ಹಣವನ್ನು ತನಗೆ ಮತ್ತು 1ನೇ ಎದುರುದಾರರಿಗೆ ನೀಡಿದರೆ ಮಾತ್ರ 1ನೇ ಎದುರುದಾರರಿಂದ ಎಮ್ಐಎಸ್ ಮಾಡಿಸಿ, ಬಿಲ್ ಹಣವನ್ನು ಮಂಜೂರು ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ. ಈ ವಿಚಾರವಾಗಿ 1ನೇ ಎದುರುದಾರರು 20,000/–ರೂ.ಗಳನ್ನು ಲಂಚವಾಗಿ ದೂರುದಾರರಿಂದ ಈಗಾಗಲೇ ಪಡೆದಿರುತ್ತಾರೆ. ದಿ:29/08/2016ರಂದು 1ನೇ ಎದುರುದಾರರನ್ನು ಭೇಟಿ ಮಾಡಿ ದೂರುದಾರರು ತಮ್ಮ ಬಿಲ್ಲಿನ ಬಗ್ಗೆ ವಿಚಾರಿಸಿದಾಗ, ಅವರು 2ನೇ ಎದುರುದಾರರಿಗೆ ತಿಳಿಸಿರುವುದಾಗಿ ಅವರನ್ನು ಭೇಟಿ ಮಾಡಲು ಹೇಳಿರುತ್ತಾರೆ. ಅದರಂತೆ ದೂರುದಾರರು 2ನೇ ಎದುರುದಾರರನ್ನು ಭೇಟಿ ಮಾಡಿದಾಗ, ಅವರು 1ನೇ ಎದುರುದಾರರಿಗೆ 10,000/– ರೂ. ಹಾಗೂ ತನಗೆ 5,000/– ರೂ.ಗಳು, ಒಟ್ಟು 15,000/– ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಅದನ್ನು ಕೊಡದಿದ್ದಕ್ಕಾಗಿ ಅವರು ದೂರುದಾರರ ಬಿಲ್ಲು ಮಾಡಿಕೊಟ್ಟಿರುವುದಿಲ್ಲ ಎಂದು ದೂರಿನಲ್ಲಿ ಹೇಳಿರುತ್ತಾರೆ.

ii. ನಂತರ ದಿನಾಂಕ:24/09/2016ರಂದು ಬೆಳಿಗ್ಗೆ 09–30 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದುದರಿಂದ, ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಚಿತ್ರದುರ್ಗ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 01/2016 ರಲ್ಲಿ ಕಲಂ 7, ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದು ಪಡಿ)ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ, ತನಿಖಾಧಿಕಾರಿಗಳು ಅದೇ ದಿನ ಅಂದರೆ 24/09/2016 ಸರ್ಕಾರಿ ಪಂಚರುಗಳಾದ (1) ಶ್ರೀ. ಹೆಚ್. ತಿಪ್ಪೇಸ್ವಾಮಿ, (ನೆರಳು ಸಾಕ್ಷಿ) (2) ಶ್ರೀ. ಸುಹೇಲ್ ಅವರುಗಳನ್ನು ಬರಮಾಡಿಕೊಂಡು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ, ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು ಅದನ್ನು ಓದಿಕೊಂಡಿದ್ದು, ಅದರಲ್ಲಿಯ ವಿಷಯವನ್ನು ತಿಳಿದುಕೊಂಡು ಮತ್ತು ಅದರಲ್ಲಿನ ವಿಷಯ ನಿಜವೆಂದು ದೂರುದಾರರಿಂದ ಖಚಿತ ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಲಂಚ ನೀಡಲು ತಂದ (ರೂ.1,000/– ಮುಖಬೆಲೆಯ 15–

ನೋಟುಗಳು) ಒಟ್ಟು 15,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ-1-ತಿಪ್ಪೇಸ್ವಾಮಿ,ರವರು ಸದರಿ ನೋಟುಗಳನ್ನು ಎಣಿಸಿ, ಅವುಗಳ ನಂ.ನ್ನು ಮತ್ತು ಮೌಲ್ಯವನ್ನು ಪರಿಶೀಲಿಸಿ ಹೇಳಿದಂತೆ ಪಂಚ-2-ಸುಹೇಲ್ ರವರು ಒಂದು ಬಿಳಿ ಹಾಳೆಯಲ್ಲಿ ನೋಟುಗಳ ನಂಬರು ಮತ್ತು ಮೌಲ್ಯವನ್ನು ಬರೆದು ಕೊಂಡಿರುತ್ತಾರೆ.

iv. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಎರಡೂ ಬದಿಗಳಿಗೆ ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚಸಾಕ್ಷಿ-1-ರವರು ಫಿನಾಫ್ತಲೀನ್ ಪೌಡರನ್ನು ಸವರಿದ ಹಣವನ್ನು ಎರಡೂ ಕೈಗಳಿಂದ ಎಣಿಸಿ, ಪರಿಶೀಲಿಸಿ, ದೂರುದಾರರು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿಗೆ ಇಟ್ಟಿರುತ್ತಾರೆ. ನಂತರ ಪಂಚ ಸಾಕ್ಷಿ-1-ರವರ ಎರಡೂ ಕೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ, ಬೇರೆ ಯಾವುದೇ ಸ್ಥಳದಲ್ಲಿ ಇಡದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ನೆರಳು ಸಾಕ್ಷಿಯಾದ ಪಂಚ-1ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟಿದ್ದು, ಅದನ್ನು ಎದುರುದಾರರನ್ನು ಬೇಟಿಯಾದಾಗ ಆನ್ ಮಾಡಿಕೊಂಡು ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಎಲ್ಲಾ ಸಿಬ್ಬಂದಿ, ದೂರುದಾರರಿಗೆ ಹಾಗೂ ಪಂಚರಿಗೆ ಸೋಪಿನಿಂದ ಕೈತೊಳೆಯಲು ಸೂಚಿಸಿದ್ದು, ಅದರಂತೆ ಅವರೆಲ್ಲರೂ ಸೋಪಿನಿಂದ ಕೈತೊಳೆದಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೊಟೋಗಳನ್ನು ತೆಗೆಯಿಸಿ, ದಿನಾಂಕ: 24/09/2016ರಂದು ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 12-30 ಗಂಟೆಯವರೆಗೆ ಚಿತ್ರದುರ್ಗ ಎಸಿಬಿ ಕಚೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆಯನ್ನು ಬೆರಳಚ್ಚು ಮಾಡಿಸಿರುತ್ತಾರೆ.

v. ಅದೇ ದಿನ ಅಂದರೆ ದಿನಾಂಕ:24/09/2016ರಂದು ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆ ಆದ ನಂತರ ದೂರುದಾರರು, ನೆರಳು ಸಾಕ್ಷಿ, ತನಿಖಾಧಿಕಾರಿಗಳು, ದಾಳಿ ತಂಡದವರು ಹಾಗೂ ಪಂಚರೊಂದಿಗೆ ಇಲಾಖಾ ವಾಹನಗಳಲ್ಲಿ ಮಧ್ಯಾಹ್ನ 12-40 ಗಂಟೆಗೆ ಚಿತ್ರದುರ್ಗ ಎಸಿಬಿ ಕಚೇರಿಯನ್ನು ಬಿಟ್ಟು, ಚಳ್ಳಕೆರೆ ತಾಲ್ಲೂಕು ಪಂಚಾಯತಿ

ಕಚೇರಿಯಿಂದ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿ, ದೂರುದಾರರಿಗೆ ಮತ್ತು ನೆರಳು ಸಾಕ್ಷಿಯವರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ಡಿಜಿಟಲ್ ವಾಯ್ಸ್‌ರೆಕಾರ್ಡ್‌ನ್ನು ನೀಡಿ ಎದುರುದಾರರನ್ನು ಭೇಟಿಮಾಡಲು ಹೋದಾಗ ಆನ್ ಮಾಡಿಕೊಳ್ಳುವಂತೆ ತಿಳಿಸಿ ಕಳುಹಿಸಿ ಕೊಟ್ಟಿರುತ್ತಾರೆ. ನಂತರ ದಾಳಿ ತಂಡದವರು 1ನೇಎದುರುದಾರರ ಕಚೇರಿಯ ಹತ್ತಿರ ಗುಪ್ತವಾಗಿ ಅಲ್ಲಲ್ಲಿ ನಿಂತುಕೊಂಡು ಗಮನಿಸುತ್ತಿರುತ್ತಾರೆ. ನಂತರ ದೂರುದಾರರು ಮತ್ತು ನೆರಳುಸಾಕ್ಷಿ 1ನೇಎದುರುದಾರರ ಕಚೇರಿಗೆ ಹೋದಾಗ, 1ನೇಎದುರುದಾರರು ಕಚೇರಿಯಲ್ಲಿದ್ದು, ಲಂಚದ ಹಣ ಕೇಳಿದ್ದು, ಆಗ ದೂರುದಾರರು ಹಣ ಕೊಡಲು ಹೋದಾಗ, 1ನೇಎದುರುದಾರರು ಅವರ ಎಡಗಡೆಯಲ್ಲಿದ್ದ ಪೇಪರ್‌ಗಳ ನಡುವೆ ಹಣ ಇಡಲು ಹೇಳಿದಾಗ, ದೂರುದಾರರು ಅವರು ಹೇಳಿದಂತೆ ಪೇಪರ್‌ಗಳ ನಡುವೆ ಹಣವನ್ನು ಇಟ್ಟಿರುತ್ತಾರೆ. ನಂತರ ದೂರುದಾರರು ಕಚೇರಿಯಿಂದ ಹೊರಗಡೆ ಬಂದು ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ದಾಳಿ ತಂಡದವರಿಗೆ ಸನ್ನೆ ಮಾಡಿರುತ್ತಾರೆ.

vi. ಆ ತಕ್ಷಣ ತನಿಖಾಧಿಕಾರಿಗಳು ಪಂಚರನ್ನು ಹಾಗೂ ದಾಳಿ ತಂಡದವರನ್ನು ಕರೆದುಕೊಂಡು ದೂರುದಾರರಿದ್ದಲ್ಲಿಗೆ ಬಂದು ನಡೆದ ಘಟನೆಯ ಬಗ್ಗೆ ಅವರನ್ನು ಮತ್ತು ನೆರಳುಸಾಕ್ಷಿಯವರನ್ನು ವಿಚಾರಿಸಲಾಗಿ, ಅವರುಗಳು ಘಟನೆಯ ಕಾಲಕ್ಕೆ ನಡೆದ ವಿದ್ಯಾಮಾನಗಳ ಬಗ್ಗೆ ತಿಳಿಸಿರುತ್ತಾರೆ ಹಾಗೂ ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ಡಿಜಿಟಲ್ ವಾಯ್ಸ್‌ರೆಕಾರ್ಡ್‌ನ್ನು ಆನ್ ಮಾಡುವುದನ್ನು ಮರೆತುಬಿಟ್ಟೆ ಎಂದು ತಿಳಿಸಿ, ಸದರಿ ವಾಯ್ಸ್‌ರೆಕಾರ್ಡ್‌ನ್ನು ವಾಪಸ್ಸು ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚರನ್ನು, ಸಿಬ್ಬಂದಿಯನ್ನು ಕರೆದುಕೊಂಡು 1ನೇ ಎದುರುದಾರರ ಕಚೇರಿಗೆ ಬಂದು 1ನೇ ಎದುರುದಾರರಿಗೆ ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಅವರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು 1ನೇ ಎದುರುದಾರರಿಗೆ ಲಂಚದ ಹಣ ತೆಗೆದುಕೊಡಲು ಕೇಳಿದಾಗ, 1ನೇ ಎದುರುದಾರರು ತಾನು ಹಣವನ್ನು ಮುಟ್ಟಿರುವುದಿಲ್ಲ ಹಾಗೂ ತಾನು ತೆಗೆದುಕೊಂಡಿರುವುದಿಲ್ಲ ಎಂದು ನಿರಾಕರಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಪಂಚ-1-ತಿಪ್ಪೇಸ್ವಾಮಿಯವರಿಗೆ ವಿಚಾರಿಸಿದಾಗ, ಅವರು ದೂರುದಾರರು ಒಳಗೆ ಹೋದಾಗ ತಾನು ಅರ್ಧ ತೆರೆದ ಆಫೀಸ್‌ನ ಬಾಗಿಲಿನಿಂದ ನೋಡುತ್ತಿದ್ದಾಗ, 1ನೇ ಎದುರುದಾರರು ಪೇಪರ್ ಕೆಳಗೆ ಇಡಿ ಎಂದು ಹೇಳಿ ಕೈ ತೋರಿಸಿದಾಗ ದೂರುದಾರರು ಲಂಚದ ಹಣವನ್ನು ಪೇಪರ್ ಕೆಳಗೆ ಇಟ್ಟಿರುತ್ತಾರೆ ಎಂದು ಹೇಳಿದ ಮೇರೆಗೆ, ಪಂಚ-1-ತಿಪ್ಪೇಸ್ವಾಮಿಯವರಿಂದ ಪೇಪರ್‌ನ್ನು ತೆಗೆಯಿಸಿ, ಹತ್ತಿಯಿಂದ ಪೇಪರ್ ಮೇಲೆ ಎಲ್ಲಾ ಭಾಗಗಳಲ್ಲಿ ಒರೆಯಿಸಿ, ಆ ಹತ್ತಿಯನ್ನು ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಸದರಿ ದ್ರಾವಣವನ್ನು ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ಅದೇ ಸಮಯಕ್ಕೆ 2ನೇ

ಎದುರುದಾರರನ್ನು ಪಿ.ಐ. ಪ್ರಕಾಶ್ ಮತ್ತು ಹೆಚ್.ಸಿ. ಪ್ರಾಣೇಶ್ ರವರು ಹಾಜರುಪಡಿಸಿದ್ದು, ಅವರಿಗೆ ತನಿಖಾಧಿಕಾರಿಗಳು ತಮ್ಮ ಪರಿಚಯ ಹೇಳಿ, ಅವರ ಪರಿಚಯ ತಿಳಿದುಕೊಂಡು ಅವರಿಗೆ ಅಲ್ಲಿಯವರೆಗೆ ನಡೆದ ವಿದ್ಯಾಮಾನಗಳನ್ನು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ-1-ತಿಪ್ಪೇಸ್ವಾಮಿರವರಿಂದ ಹಣದ ಮೇಲಿದ್ದ ಪೇಪರ್‌ನ್ನು ಪರಿಶೀಲಿಸಿ ಅದನ್ನು ಸೀಲ್ ಮಾಡಿ ವಶಕ್ಕೆ ಪಡೆದಿರುತ್ತಾರೆ ಹಾಗೂ ನೋಟು ಇಟ್ಟ ಸ್ಥಳವನ್ನು ಒರೆಯಿಸಿದ ಹತ್ತಿಯನ್ನು ಒಣಗಿಸಿ ಸೀಲ್ ಮಾಡಿ ವಶಕ್ಕೆ ಪಡೆದಿರುತ್ತಾರೆ. ನಂತರ ನೋಟುಗಳನ್ನು ಪಂಚ-1-ತಿಪ್ಪೇಸ್ವಾಮಿಯವರಿಂದ ತೆಗೆಯಿಸಿ, ಪಂಚ-2ರವರ ಬಳಿ ಇದ್ದ ಪೇಪರ್‌ನಲ್ಲಿದ್ದ ನೋಟಿನ ಸಂಖ್ಯೆಯೊಂದಿಗೆ ತಾಳೆ ಮಾಡಿ ನೋಡಲಾಗಿ, ಅವು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ನಂ.ಗೆ ಹಾಗೂ ಮೌಲ್ಯಕ್ಕೆ ತಾಳೆಯಾಗಿರುತ್ತವೆ. ನಂತರ ಅವುಗಳನ್ನು ಒಂದು ಕವರ್‌ಗೆ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ-1-ತಿಪ್ಪೇಸ್ವಾಮಿರವರಿಂದ ಹಣದ ಕೆಳಗಿದ್ದ ಪೇಪರ್‌ನ್ನು ಪರಿಶೀಲಿಸಿ, ಅದನ್ನು ಸಿಬ್ಬಂದಿಯಿಂದ ಹತ್ತಿಯಲ್ಲಿ ಒರೆಯಿಸಿ, ಒರೆಯಿಸಿದ ಹತ್ತಿಯನ್ನು ಸಿಬ್ಬಂದಿಯಿಂದ ತಯಾರಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಹತ್ತಿಯನ್ನು ಒಣಗಿಸಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ ಹಾಗೂ ಹಣದ ಕೆಳಗಿದ್ದ ಪೇಪರ್‌ನ್ನು ಸಹಾ ತಮ್ಮ ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

vii. ತನಿಖಾಧಿಕಾರಿಗಳು 1ನೇಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, 1ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ". . . . . ಮಧ್ಯಾಹ್ನ 1-30 ಗಂಟೆಗೆ ರಾಜು ಎಂಬುವವರು ನಾನು ಜಿಲ್ಲಾ ಪಂಚಾಯಿತಿ ಸಭೆಗೆ ಹೋಗುವಾಗ, ನಿಮ್ಮ ಹತ್ತಿರ ಮಾತನಾಡಬೇಕೆಂದು ಒಳಗೆ ನನ್ನನ್ನು ಕರೆದುಕೊಂಡು ಬಂದರು. ಕಾಮಗಾರಿಗಳ ನಾಮಫಲಕಗಳ ಬಿಲ್ಲುಗಳನ್ನು ಪಿಡಿಓ ಗ್ರಾ.ಪಂ. ಉಳ್ಳಾರ್ತಿ ಎಮ್‌ಐಎಸ್ ಮಾಡಿರುವುದಿಲ್ಲ ಎಂದು ತಿಳಿಸಿದರು. ಅದರಂತೆ 16-ಕಾಮಗಾರಿಗಳ ನಾಮಫಲಕವನ್ನು ಪರಿಶೀಲಿಸಿ ಎಮ್‌ಐಎಸ್ ಮಾಡಲು ತಿಳಿಸಿರುತ್ತೇನೆ ಮತ್ತು ಉಳಿದವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ತಿಳಿಸಿದೆ. ಆದರೆ ಅವರು ಹಣ ನೀಡಲು ಮುಂದೆ ಬಂದರು ನಾನು ಬೇಡವೆಂದರೂ ಅವರು ನನ್ನ ಟೇಬಲ್ ಮೇಲೆ ಪೇಪರ್‌ನ ಅಡಿಯಲ್ಲಿ ಹಣ ಇಟ್ಟರು. ನಾನು ಅದನ್ನು ನೋಡದೆ ಹೊರಗಡೆ ಅಂದರೆ ಸಭೆಗೆ ಹೋಗಲು ಹೊರಗಡೆ ಹೊರಟೆ. ಆಗ ಬಂದು ಅಧಿಕಾರಿಗಳು ನನ್ನ ಕೈಯನ್ನು ಹಿಡಿದುಕೊಂಡರು. ನಾನು ಇವರಿಗೆ ಹಣ ನೀಡುವಂತೆ ಯಾರಿಗೂ ಕೇಳಿರುವುದಿಲ್ಲ, ದುರುದ್ದೇಶದಿಂದ ನನ್ನನ್ನು ಈ ಕೇಸಿನಲ್ಲಿ ಸಿಗಿಸುವ ಉದ್ದೇಶದಿಂದ ಈ ಕಾರ್ಯವನ್ನು ಮಾಡಿರುತ್ತಾರೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

viii. ತನಿಖಾಧಿಕಾರಿಗಳು 2ನೇ ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, 2ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ " ವಿಷಯ: ಕಾರ್ಯ ನಿರ್ವಾಹಕ ಅಧಿಕಾರಿಗಳ ಕಚೇರಿಯ ಟೇಬಲ್ ಮೇಲೆ ಹಣ ಇರುವ ಬಗ್ಗೆ. ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಾಹಕ ಅಧಿಕಾರಿಗಳ, ತಾಲ್ಲೂಕು ಪಂಚಾಯಿತಿ, ಚಳ್ಳಕೆರೆ, ಇವರ ಕಚೇರಿಯ ಟೇಬಲ್ ಮೇಲೆ ಹಣವನ್ನು ಇಟ್ಟಿದ್ದಾರೆ ಎಂದು ದೂರುದರರು ತಿಳಿಸಿದ್ದಾರೆ, ಈ ವಿಷಯದಲ್ಲಿ ನಾನು ಅಂದರೆ ಪಿಡಿಓ ಎಸ್. ಬಸವರಾಜು, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ, ಕರ್ತವ್ಯ ನಿರ್ವಹಿಸುತ್ತಿದ್ದು, ಈ ದಿನ ಅಂದರೆ ನನಗೆ ಹೆಚ್ಚುವರಿಯಾಗಿ ಬೇಡರೆಡ್ಡಿಹಳ್ಳಿ ಗ್ರಾಮ ಪಂಚಾಯಿತಿಗೆ ನೇಮಕ ಮಾಡಿರುತ್ತಾರೆ. ನಾನು ಶುಕ್ರವಾರದಂದು ನೌಕರರ ಸಂಬಳಕ್ಕೆ ಎಸ್.ಬಿ.ಐ. ಬ್ಯಾಂಕಿನಲ್ಲಿ ಹೊಸದಾಗಿ ತೆರೆದ ಖಾತೆಯಿಂದ ಹಣ ಪಡೆಯಲು ಹೋದಾಗ ಬ್ಯಾಂಕ್ ವ್ಯವಸ್ಥಾಪಕರು, ನಿಮಗೆ ಚೆಕ್‌ಗಳು ಬರಲು ಸುಮಾರು 15 ದಿವಸಗಳು ಆಗಬಹುದು ಎಂದಾಗ, ಅಧ್ಯಕ್ಷರು ಕೆಲವು ಸದಸ್ಯರು ಸೇರಿ ಬ್ಯಾಂಕ್ ವ್ಯವಸ್ಥಾಪಕರಲ್ಲಿ ನಮ್ಮ ನೌಕರರಿಗೆ ಸುಮಾರು ವರ್ಷದಿಂದಲೆ ಸಂಬಳ ಇರುವುದಿಲ್ಲ. ಆದ್ದರಿಂದ ತಾವು ದಯಮಾಡಿ ವಿತ್ ಡ್ರಾ ಫಾರಂನಿಂದ ನಮ್ಮ ಬೇಡಿಕೆ ನೀಡುತ್ತೇವೆ, ತಾವು ಹಣವನ್ನು ನೀಡಿ ಎಂದಾಗ ಅವರು ಹಣ ನೀಡಿದಾಗ ಈ ದಿನ ನಾನು ಬೇಡರೆಡ್ಡಿಹಳ್ಳಿ ಗ್ರಾಮ ಪಂಚಾಯಿತಿ 10.30ಕ್ಕೆ ಹೋಗಿ ಅಲ್ಲಿ ಎಲ್ಲಾ ನೌಕರರಿಗೆ ಸಂಬಳವನ್ನು ನೀಡಿ ವಿತರಿಸಿ, ನಾನು ವಾಪಾಸ್ ಚಳ್ಳಕೆರೆಗೆ ಬರುವಾಗ ಪೋಲೀಸ್ ಇಲಾಖೆಯವರು ನನ್ನನ್ನು ಇ.ಓ. ಕಚೇರಿಗೆ ಕರೆತಂದಾಗಲೆ ಈ ಮೇಲಿನ ವಿಷಯದಲ್ಲಿ ಯಾವುದೇ ತರಹದ ಸಂಬಂದವಿಲ್ಲ ಮತ್ತು ನನಗೆ ಯಾವುದೇ ತರಹದ ಭಾಗತ್ವವಿರುವುದಿಲ್ಲ ಎಂದು ತಮ್ಮ ಗಮನಕ್ಕೆ ತರುತ್ತಾ, ನನ್ನನ್ನು ಕ್ಷಮಿಸಿ, ನನ್ನ ಮೇಲೆ ಯಾವ ತರಹದ ತಪ್ಪು ಇರುವುದಿಲ್ಲ, ಆದ್ದರಿಂದ ಕೈ ಮುಗಿದು ಬೇಡಿಕೊಳ್ಳುವೆ. ನನ್ನನ್ನು ದಯಮಾಡಿ ಕ್ಷಮಿಸಿ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಮತ್ತು ಪಂಚಸಾಕ್ಷಿ-2ರವರಿಗೆ ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಮೊದಲಿಗೆ ದೂರುದಾರರು ಇ.ಓ.ರವರು ಸುಳ್ಳು ಹೇಳಿಕೆ ಪತ್ರ ನೀಡಿರುತ್ತಾರೆ. ಇ.ಓ.ರವರು ಹಣವನ್ನು ಇಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ. ನಂತರ ನೆರಳು ಸಾಕ್ಷಿ ತಿಪ್ಪೇಸ್ವಾಮಿ ರವರನ್ನು ವಿಚಾರಿಸಿದಾಗ ಇ.ಓ.ರವರು ಹಣವನ್ನು ಟೇಬಲ್ ಮೇಲೆ ಇಡು ಎಂದು ತಿಳಿಸಿದ ನಂತರ ಫಿರ್ಯಾದಿ ಹಣವನ್ನು ಟೇಬಲ್ ಮೇಲೆ ಇಟ್ಟರು ಎಂದು ತಿಳಿಸಿರುತ್ತಾರೆ.

x. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ 1ನೇ ಎದುರುದಾರರಿಗೆ ಸೂಚಿಸಿದಾಗ, 1ನೇ ಎದುರುದಾರರು

ಸದರಿ ದಾಖಲೆಗಳು 2ನೇ ಎದುರುದಾರರಾದ ಪಿಡಿಓರವರ ಬಳಿ ಇರುತ್ತವೆ ಎಂದು ತಿಳಿಸಿರುತ್ತಾರೆ. ನಂತರ 2ನೇ ಎದುರುದಾರರಾದ-ಪಿಡಿಓರವರನ್ನು ವಿಚಾರಿಸಿದಾಗ ಅವರ ಬಳಿ ಇದ್ದ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಿ, ಸದರಿ ದಾಖಲಾತಿಗಳನ್ನು ಜೆರಾಕ್ಸ್ ಮಾಡಿಸಿ ಅದಕ್ಕೆ ಪಂಚರ ಸಹಿ ಪಡೆದು 1ನೇ ಎದುರುದಾರರಾದ ಕಾರ್ಯ ನಿರ್ವಾಹಕ ಅಧಿಕಾರಿ, ಇವರಿಂದ ಧೃಢೀಕರಿಸಿಕೊಂಡು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು 1 ಮತ್ತು 2ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

xi. ನಂತರ ತನಿಖಾಧಿಕಾರಿಗಳು ಮೇಲ್ಕಂಡ ಟ್ರಾಪ್ ಮಹಜರ್‌ಗೆ ಸಂಬಂದಿಸಿದ ಪ್ರಮುಖ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗ್ರಾಫಿ ಮಾಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 24/09/2016ರಂದು ಚಳ್ಳಕೆರೆ ನಗರದ ಚಿತ್ರದುರ್ಗ ರಸ್ತೆಯಲ್ಲಿರುವ ತಾಲ್ಲೂಕು ಪಂಚಾಯಿಸಿ ಕಚೇರಿಯಲ್ಲಿ 1ನೇ ಮಹಡಿಯಲ್ಲಿರುವ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿ,ಯವರ ಕೊಠಡಿಯಲ್ಲಿ ಮಧ್ಯಾಹ್ನ 02-00 ಗಂಟೆಯಿಂದ ಸಂಜೆ 07-45 ಗಂಟೆಯವರೆಗೆ ಲ್ಯಾಪ್‌ಟಾಪ್‌ನಲ್ಲಿ ಟ್ರಾಪ್ ಮಹಜರ್‌ನ್ನು ತನಿಖಾಧಿಕಾರಿಗಳು ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

xii. ನಂತರ ದಿನಾಂಕ: 26/09/2016ರಂದು ತನಿಖಾಧಿಕಾರಿಗಳು ಚಿತ್ರದುರ್ಗ ಎಸಿಬಿ ಪೋಲೀಸ್ ಠಾಣಾ ಕಚೇರಿಗೆ ಪಂಚರಾದ 1) ಶ್ರೀ. ಹೆಚ್. ತಿಪ್ಪೇಸ್ವಾಮಿ, (ನೆರಳು ಸಾಕ್ಷಿ) 2) ಶ್ರೀ ಸುಹೇಲ್, ಅವರುಗಳನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ದೂರುದಾರರು ತನಗೆ ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಯ ಪಿಡಿಓರವರು ಕಾಮಗಾರಿಗಳನ್ನು ಸೂಚಿಸುವ ನಾಮಫಲಕಗಳನ್ನು ಸರಬರಾಜು ಮಾಡಲು ದಿನಾಂಕ: 14/08/2015 ಹಾಗೂ ದಿನಾಂಕ:02/01/2016ರಂದು ಸೂಚಿಸಿದ ಮೂಲಪ್ರತಿ ಹಾಗೂ ದೂರುದಾರರು ನಾಮಫಲಕಗಳನ್ನು ಪಿಡಿಓ ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿ ರವರಿಗೆ ಡೆಲಿವರಿ ಮಾಡಿದ ಬಗ್ಗೆ ತನ್ನ ಮಾಹಿತಿಗಾಗಿ ಇಟ್ಟುಕೊಂಡಿದ್ದ ದಿನಾಂಕ:20/08/2015 ಹಾಗೂ ದಿನಾಂಕ:06/01/2016ರ ಕಾರ್ಬನ್ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ತಮ್ಮ ವಶಕ್ಕೆ ಪಡೆದು ಸಂಜೆ 5-30 ರಿಂದ 6-30ರ ಸಮಯದಲ್ಲಿ ಈ ಬಗ್ಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ.

xiii. ದಿನಾಂಕ:17/06/2017ರಂದು ತನಿಖಾಧಿಕಾರಿಗಳು ಚಿತ್ರದುರ್ಗ ಎಸಿಬಿ ಪೋಲೀಸ್ ಠಾಣಾ ಕಚೇರಿಗೆ ಪಂಚರಾದ 1) ಶ್ರೀ. ಹೆಚ್. ತಿಪ್ಪೇಸ್ವಾಮಿ, (ನೆರಳು ಸಾಕ್ಷಿ) 2) ಶ್ರೀ. ಸುಹೇಲ್, ಅವರುಗಳನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ 3ನೇ ಎದುರುದಾರರು ದಿ:20/08/2015 ರಂದು ಹಾಗೂ ದಿ:06/01/2016ರಂದು ನಾಮಫಲಕಗಳನ್ನು ಸರಬರಾಜು ಮಾಡಿದ ಬಗ್ಗೆ ಹಾಗೂ ಸ್ವೀಕರಿಸಿದ ಬಗ್ಗೆ ಮೂಲ

ದಾಖಲಾತಿಗಳನ್ನು ಹಾಜರುಪಡಿಸಿದ್ದುವುಗಳನ್ನು ವಶಕ್ಕೆ ಪಡೆದು ಅದೇದಿನ ಮಧ್ಯಾಹ್ನ 3–30 ಗಂಟೆಯಿಂದ 4–30 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ.

xiv. ದಿನಾಂಕ:13/11/2017ರಂದು ತನಿಖಾಧಿಕಾರಿಗಳು ಚಿತ್ರದುರ್ಗ ಎಸಿಬಿ ಪೋಲೀಸ್ ಠಾಣಾ ಕಚೇರಿಗೆ ಪಂಚರಾದ 1) ಶ್ರೀ. ಹೆಚ್. ತಿಪ್ಪೇಸ್ವಾಮಿ, (ನೆರಳು ಸಾಕ್ಷಿ) 2) ಶ್ರೀ. ಸುಹೇಲ್, ಅವರುಗಳನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಯ ಹಾಲಿ ಪಿಡಿಓರವರಾದ ಶ್ರೀ. ಹನುಮಂತರಾಜುರವರು ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಯ ಠರಾವು ಪುಸ್ತಕವನ್ನು ಹಾಜರುಪಡಿಸಿದ್ದನ್ನು ವಶಕ್ಕೆ ಪಡೆದು ಅದೇದಿನ ಮಧ್ಯಾಹ್ನ 3–45 ಗಂಟೆಯಿಂದ 4–30 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಠರಾವು ಪುಸ್ತಕದಲ್ಲಿ ದಿ:19/10/2015ರ ನಡವಳಿ ಕ್ರಮಸಂಖ್ಯೆ: 3/1ರಲ್ಲಿ "2015–16ನೇ ಸಾಲಿನ ಕಾಮಗಾರಿಗಳ ನಾಮಫಲಕಗಳನ್ನು ಖರೀದಿಸುವ ಬಗ್ಗೆ" ಎಂದು ನಮೂದಿಸಿದ್ದು, ಅದರ ಬಲಭಾಗದಲ್ಲಿ "ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ನಾಮಫಲಕಗಳನ್ನು ಖರೀದಿಸಲು ತಿಳಿಸಲಾಗಿ, ಕಾಮಗಾರಿಗಳಿಗೆ ನಾಮಫಲಕಗಳನ್ನು ಖರೀದಿಸಲು ತೀರ್ಮಾನಿಸಲಾಯಿತು" ಎಂದು ನಮೂದಿಸಿರುತ್ತದೆ ಹಾಗೂ ಅಂದಿನ ನಡವಳಿಯ ಕೊನೆಯಲ್ಲಿ ಅಧ್ಯಕ್ಷರು ಶ್ರೀ. ಗೋವಿಂದರಾಜು ಹಾಗೂ ಪಿಡಿಓ ಹಾಗೂ 3ನೇ ಎದುರುದಾರರಾದ ತಿಮ್ಮಾರೆಡ್ಡಿಯವರು ಸಹಿ ಮಾಡಿರುತ್ತಾರೆ. ಠರಾವು ಪುಸ್ತಕದಲ್ಲಿ ಬರೆದ ನಡವಳಿಗಳನ್ನು ಪರಿಶೀಲಿಸಲಾಗಿ ನಡವಳಿ ಕ್ರಮಸಂಖ್ಯೆಗಳನ್ನು 1,2,3_ ಈ ರೀತಿಯಲ್ಲಿ ನೀಡಿರುವುದು ಕಂಡುಬಂದಿದ್ದು, ಪುಟಸಂಖ್ಯೆ 19ರಲ್ಲಿ ಮಾತ್ರ 3/1 ಎಂದು ನಮೂದಿಸಿರುವುದು ಕಂಡುಬಂದಿರುತ್ತದೆ. ಠರಾವು ಪುಸ್ತಕದಲ್ಲಿ ಬರೆದ ಹಸ್ತಾಕ್ಷರಗಳ ಬಗ್ಗೆ ತನಿಖಾಧಿಕಾರಿಗಳು ಪಿಡಿಓರವರನ್ನು ವಿಚಾರ ಮಾಡಲಾಗಿ, ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಯ ಕಚೇರಿಯಲ್ಲಿರುವ ಹಂಗಾಮಿ ಗುಮಾಸ್ತರಾದ ಬಿ. ಕರಿಯಣ್ಣನವರು ಬರೆದ ಹಸ್ತಾಕ್ಷರಗಳು ಆಗಿರುತ್ತವೆ ಎಂದು ತಿಳಿಸಿರುತ್ತಾರೆ.

xv. ದಿನಾಂಕ:14/11/2017ರಂದು ತನಿಖಾಧಿಕಾರಿಗಳು ಸದರಿ ಹಂಗಾಮಿ ಗುಮಾಸ್ತರಾದ ಬಿ. ಕರಿಯಣ್ಣನವರಿಗೆ ನೋಟೀಸ್ ಜಾರಿ ಮಾಡಿ ದಿ:16/11/2017ರಂದು ಅವರನ್ನು ಠಾಣೆಗೆ ಬರಮಾಡಿಕೊಂಡು ಹೇಳಿಕೆಯನ್ನು ಪಡೆದಿದ್ದು, ಅವರು ದಿ:19/10/2015ರಂದು ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಯ ಕಚೇರಿ ಕಟ್ಟಡದಲ್ಲಿ ಸಾಮಾನ್ಯ ಸಭೆಯನ್ನು ಕೈಗೊಂಡ ಬಗ್ಗೆ ನಡಾವಳಿಯನ್ನು ಕ್ರಮಸಂಖ್ಯೆಗಳನ್ನು 1,2,3,4,5,6,7,8,_ಎಂಬುದಾಗಿ ಪಿಡಿಓರವರು ಮತ್ತು ಅಧ್ಯಕ್ಷರು ಹೇಳಿದಂತೆ ಬರೆದಿರುವುದಾಗಿ, ಕ್ರಮಸಂಖ್ಯೆಗಳನ್ನು 1,2,4,5,6,8 ರಲ್ಲಿ ಬರೆದ ನಡವಳಿ ಅಂಶಗಳ ಕೆಳಗೆ ಒಂದು ಲೈನ್ ಖಾಲಿ ಬಿಟ್ಟಿದ್ದು, ಕ್ರಮಸಂಖ್ಯೆ 3ರ ನಂತರ ಮೂರು ಲೈನ್‌ಗಳನ್ನು ಹಾಗೂ ಕ್ರಮಸಂಖ್ಯೆ 7ರನಂತರ ಎರಡು ಲೈನ್ ಗಳನ್ನು ಖಾಲಿ ಬಿಡಲಾಗಿತ್ತು, 2017ನೇ ಸಾಲಿನಲ್ಲಿ ಒಂದು ದಿನ ಪಿಡಿಓ ತಿಮ್ಮಾರೆಡ್ಡಿರವರು ತನ್ನನ್ನು ಕರೆದು ಸದರಿ ನಡವಳಿಕೆಯ ಠರಾವು ಪುಸ್ತಕವನ್ನು ನೀಡಿ ಪುಟಸಂಖ್ಯೆ 19ರಲ್ಲಿ ಕ್ರಮಸಂಖ್ಯೆ 3ರ ನಂತರ ಖಾಲಿ ಇದ್ದ ಮೂರು ಲೈನ್‌ಗಳಲ್ಲಿ

ಕ್ರಮಸಂಖ್ಯೆ 3/1 ಎಂದು ನಮೂದಿಸಿ, **ವಿಷಯ** ಎಂಬ ಕಾಲಂನಲ್ಲಿ "2015-16ನೇ ಸಾಲಿನ ಕಾಮಗಾರಿಗಳ ನಾಮಫಲಕಗಳನ್ನು ಖರೀದಿಸುವ ಬಗ್ಗೆ" ಎಂಬುದನ್ನು ಹಾಗೂ **ತೀರ್ಮಾನ** ಎಂಬ ಕಾಲಂನಲ್ಲಿ "ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ನಾಮಫಲಕಗಳನ್ನು ಖರೀದಿಸಲು ತಿಳಿಸಲಾಗಿ, ಕಾಮಗಾರಿಗಳಿಗೆ ನಾಮಫಲಕಗಳನ್ನು ಖರೀದಿಸಲು ತೀರ್ಮಾನಿಸಲಾಯಿತು" ಎಂಬುದಾಗಿ ಬರೆಯಲು ತಿಳಿಸಿದ್ದು, ಅದರಂತೆ ತಾನು ಪಿಡಿಓ ತಿಮ್ಮಾರೆಡ್ಡಿಯವರು ಹೇಳಿದ್ದನ್ನು ಠರಾವು ಪುಸ್ತಕದಲ್ಲಿ ಬರೆದಿರುತ್ತೇನೆ ಎಂಬುದಾಗಿ ಹೇಳಿರುತ್ತಾರೆ. ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಗೆ ಕಾಮಗಾರಿಗಳನ್ನು ಸೂಚಿಸುವ ಅಗತ್ಯವಿರುವ ನಾಮಫಲಕಗಳ ಖರೀದಿಗೆ ಸಂಬಂಧಿಸಿದಂತೆ ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಆಕ್ಟ್-1999ನ (Substituted by Act 4 of 2003 w.e.f. 27.03.2003 & Clause e and ee substituted by Act 21 of 201 w.e.f. 25.08.2001) ಕಲಂ. 4(ee)(ii)ರನ್ವಯ ರೂ.1,00,000/-ಗಳಿಗೂ ಅಧಿಕ ಮೊತ್ತದ ಬೆಲೆಯುಳ್ಳ ನಾಮಫಲಕಗಳ ಖರೀದಿಗಾಗಿ 3ನೇ ಎದುರುದಾರರು ಗ್ರಾಮ ಪಂಚಾಯಿತಿಯ ಯಾವುದೇ ಸದಸ್ಯರನ್ನು ಆಹ್ವಾನಿಸಿ ಸಭೆ ನಡೆಸದೆ, ಟೆಂಡರ್ ಕರೆಯದೆ ಸಂಬಂಧ ಪಟ್ಟ ಮೇಲಾಧಿಕಾರಿಗಳಿಂದ ಅನುಮೋದನೆ ಪಡೆಯದೆ ತಮ್ಮ ಸ್ವಂತ ಲಾಭದ ಉದ್ದೇಶಕ್ಕಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಆಕ್ಟ್-1999ನ (Substituted by Act 4 of 2003 w.e.f. 27.03.2003 & Clause e and ee substituted by Act 21 of 201 w.e.f. 25.08.2001) ಕಲಂ. 4(ee)(ii)ರ ನಿಯಮವನ್ನು ಪಾಲನೆ ಮಾಡದೆ ಕಲಂ 23ರ ರೀತ್ಯಾ ಅಪರಾಧ ಎಸಗಿರುತ್ತಾರೆ. ನಂತರ ತನಿಖಾಧಿಕಾರಿಗಳು ಇದೇ ಕಾರಣಕ್ಕಾಗಿ 3ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

xvi. ಟೇಬಲ್ ಮೇಲೆ ಲಂಚದ ಹಣ ಇಟ್ಟ ಪೇಪರ್‌ನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ಸಿಬ್ಬಂದಿಯಿಂದ ತಯಾರಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಫ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರುಗಳನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರುಗಳನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರುಗಳ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

xvii. ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರುಗಳು ಅವರ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ

ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021)ರ ನಿಯಮ 3(1) (i) ರಿಂದ (iii) ನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

xviii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xix. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, 1 ಮತ್ತು 2ನೇ ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ. (3ನೇ ಎದುರುದಾರರು ದಿನಾಂಕ:12/05/2021ರಂದು ಮೃತಪಟ್ಟಿರುತ್ತಾರೆ.)

2) ಮೇಲೆ ಹೇಳಿದ ಕಾರಣಕ್ಕಾಗಿ 1 ಮತ್ತು 2ನೇ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, 1 ಮತ್ತು 2ನೇ ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, 1ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 01/01/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, 1ನೇ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರ ದೂರು ಸತ್ಯಕ್ಕೆ ದೂರವಾಗಿದೆ, ನಾಮಫಲಕಗಳನ್ನು ಸರಬರಾಜು ಮಾಡಲು ಕೊಟೇಶನ್ ಕರೆಯುವುದು, ಕಾರ್ಯಾದೇಶ ನೀಡುವುದು ಹಾಗೂ ನಾಮಫಲಕಗಳನ್ನು ದಾಸ್ತಾನಿಗೆ ತೆಗೆದುಕೊಂಡು ಸರಬರಾಜುದಾರರಿಗೆ ಹಣ ಪಾವತಿಸುವ ಕಾರ್ಯ ಹಂಚಿಕೆಯು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಿಡಿಓರವರದ್ದಾಗಿದೆ. ಸದರೀ ಕಾರ್ಯದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾದ ನನ್ನ ಪಾತ್ರ ಇರುವುದಿಲ್ಲ. ದೂರುದಾರರ ಕೆಲಸಕ್ಕೆ ಸಂಬಂಧಿಸಿದಂತೆ ನನ್ನ ಕಚೇರಿಯಲ್ಲಿ ಯಾವುದೇ ಕಡತ ತೆರೆದಿರುವುದಿಲ್ಲ ಮತ್ತು ನಿರ್ವಹಿಸಿರುವುದಿಲ್ಲ. ದಿ:24/09/2016ರಂದು ಮಧ್ಯಾಹ್ನ 1–30ಕ್ಕೆ ನಾನು ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇಲ್ಲಿ ಕರೆದಿರುವ

ಸಭೆಗೆ ಹೊರಡುತ್ತಿರುವಾಗ ದೂರುದಾರ ಮತ್ತು ಇತರ 8-ಜನರು ದೊಡ್ಡ ಉಳ್ಳಾರ್ತಿ ಗ್ರಾಮ ಪಂಚಾಯಿತಿಗೆ ಸರಬರಾಜು ಮಾಡಿದ ನಾಮಫಲಕಗಳ ಬಿಲ್ಲಿನ ಬಗ್ಗೆ ವಿಚಾರಿಸಿದ ನಂತರ ನಾನು ಅವರ ಜೊತೆ ಮಾತನಾಡಿ ಮೀಟಿಂಗ್‌ಗೆ ಹೊರಟಿದ್ದು, ಆಗ ದೂರುದಾರರ ಮತ್ತು ಅವರ ಜೊತೆಯಲ್ಲಿದ್ದ 8ರಿಂದ 10-ಜನರು ಸೇರಿಕೊಂಡು ನನಗೆ ಗೊತ್ತಾಗದಂತೆ ಹಣವನ್ನು ನನ್ನ ಟೇಬಲ್‌ನ ಪೇಪರ್ ಅಡಿಯಲ್ಲಿ ಇಟ್ಟಿರುತ್ತಾರೆ. ಸದರೀ ಹಣವನ್ನು ಇಟ್ಟಿರುವುದು ನನಗೆ ತಿಳಿದಿರುವುದಿಲ್ಲ. ನಾನು ಸಭೆಗೆ ಹೋಗಲು ಕೊಠಡಿಯಿಂದ ಹೊರಗೆ ಹೋಗುವಾಗ ನನ್ನ ಕೈಗಳನ್ನು ಪೋಲೀಸ್ ಅಧಿಕಾರಿಗಳು ಎಂದು ಹೇಳುವ ಅಧಿಕಾರಿಗಳು ಹಿಡಿದುಕೊಂಡರು. ನಾನು ನಡೆದ ಘಟನೆಯ ಬಗ್ಗೆ ಸ್ಥಳದಲ್ಲಿ ಲಿಖಿತವಾಗಿ ನೀಡಿರುತ್ತೇನೆ. ದೂರುದಾರರನ್ನು ಸ್ಪೆ. ಕೇಸ್ ಸಿ.ಸಿ.ನಂ. 07/2018ರಲ್ಲಿ ಪಿಡಬ್ಲ್ಯು-1 ಎಂದು ವಿಚಾರಣೆ ಮಾಡಿದ್ದು, ಸದರಿ ಕೇಸಿನಲ್ಲಿ ಅವರು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ದೂರುದಾರರಿಂದ ನಾನು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ದೂರುದಾರರಿಗೆ ಸಂಬಂಧಿಸಿದ ಕಡತ ನನ್ನ ಬಳಿ ಇರಲಿಲ್ಲ. ದೂರುದಾರರಿಗೆ ಸಂಬಂದಿಸಿದ ಕೆಲಸದ ಕಾರ್ಯ ಹಂಚಿಕೆ ನನಗೆ ಇರಲಿಲ್ಲ. ದೂರುದಾರರು ಲಂಚದ ಹಣವನ್ನು ನನ್ನ ಕೈಗೆ ನೀಡಿರುವುದಿಲ್ಲ. ದಾಳೀ ವೇಳೆಯಲ್ಲಿ ನನ್ನ ಕೈ ಕೆಂಪಾಗಿರುವುದಿಲ್ಲ, ದೂರುದಾರರೊಂದಿಗೆ ನಾನು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದಿಲ್ಲ ಮತು ಲಂಚದ ಹಣ ಪಡೆದಿರುವುದಿಲ್ಲ. ಲಂಚದ ಬೇಡಿಕೆ ವಾಯ್ಸ್ ರೆಕಾರ್ಡ್‌ನಲ್ಲಿ ಇರದೇ ಇದ್ದುದರಿಂದ ಉದ್ದೇಶ ಪೂರ್ವಕವಾಗಿ ದೂರುದಾರರು ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಲು ಮರೆತಿರುವುದಾಗಿ ಪಂಚನಾಮೆಯಲ್ಲಿ ಸುಳ್ಳು ದಾಖಲು ಮಾಡಲಾಗಿದೆ. ಆದ್ದರಿಂದ ಪ್ರಸ್ತುತ ತನಿಖೆಯಲ್ಲಿ ಅಮಾಯಕನಾದ ನನ್ನನ್ನು ಸಿಲುಕಿಸಲು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಚಿತ್ರದುರ್ಗ ಪ್ರಧಾನ ಜಿಲ್ಲಾ ನ್ಯಾಯಾಲಯದ ಸಿ.ಸಿ.ನಂ.07/2018ರಲ್ಲಿ ಇಲಾಖಾ ವಿಚಾರಣೆಯಲ್ಲಿ ಇರುವ ಆರೋಪಗಳ ಬಗ್ಗೆ ವಿಚಾರಣೆ ಪ್ರಗತಿಯಲ್ಲಿರುವುದರಿಂದ ಸರ್ಕಾರದ ಸುತ್ತೋಲೆ ಸಂ:ಉಂಇ (S-1) 38, SSR 58, dated:30/10/1958 ರನ್ವಯ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಅವಕಾಶ ಇರುವುದಿಲ್ಲ. ಇಲಾಖಾ ವಿಚಾರಣೆ ಮುಂದುವರಿಸಿದಲ್ಲಿ ಅಮಾಯಕನಾದ ನನಗೆ ತೊಂದರೆ ಹೊರತು ಆರೋಪ ಸಾಬೀತು ಪಡಿಸಲು ಸಾಕ್ಷ್ಯಾಧಾರಗಳು ಇರುವುದಿಲ್ಲ. ಎ.ಸಿ.ಬಿ. ಅಧಿಕಾರಿಗಳು ನನ್ನ ವಿರುದ್ಧ ತರಾತುರಿಯಲ್ಲಿ ಸುಳ್ಳು ಮೊಕದ್ದಮೆಯನ್ನು ಸೃಷ್ಟಿಸಿರುತ್ತಾರೆ. ಕಾರಣ, ಪ್ರಸ್ತಾವಿತ ಕ್ರಮಗಳನ್ನು ಕೈ ಬಿಟ್ಟು ಕಡತವನ್ನು ಮುಕ್ತಾಯಗೊಳಿಸಲು ಕೋರಲಾಗಿದೆ" ಎಂದು ಸಮಜಾಯಿಷಿ ನೀಡಿರುತ್ತಾರೆ.

3) 2ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 31/12/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, 2ನೇ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರ ದೂರು ಸತ್ಯಕ್ಕೆ ದೂರವಾಗಿದೆ, ನಾಮಫಲಕಗಳನ್ನು ಸರಬರಾಜು ಮಾಡಲು ಕೊಟೇಶನ್ ಕರೆಯುವುದು, ಕಾರ್ಯಾದೇಶ ನೀಡುವುದು ಹಾಗೂ ನಾಮಫಲಕಗಳನ್ನು ದಾಸ್ತಾನಿಗೆ ತೆಗೆದುಕೊಂಡು ಸರಬರಾಜುದಾರರಿಗೆ ಹಣ ಪಾವತಿಸುವ ಕಾರ್ಯ ಹಂಚಿಕೆಯು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಿಡಿಓರವರದ್ದಾಗಿದೆ. ಸದರಿ ವಿಷಯದಲ್ಲಿ ಯಾವುದೇ ಕೆಲಸಕಾರ್ಯಗಳು ಆಗಲೀ ಪತ್ರ ವ್ಯವಹಾರವಾಗಲೀ ಗ್ರಾಮ ಪಂಚಾಯಿತಿಯಿಂದ ತಾಲ್ಲೂಕು ಪಂಚಾಯಿತಿಗೆ ಆಗಲೀ

ಮತ್ತು ಜಿಲ್ಲಾ ಪಂಚಾಯಿತಿಗೆ ಆಗಲೀ ನಡೆದಿರುವುದಿಲ್ಲ. ದೂರುದಾರರ ಹೇಳಿಕೆಯ ಪ್ರಕಾರ ಕೆಲಸಕ್ಕೆ ಸಂಬಂಧಿಸಿದಂತೆ ನಮ್ಮ ಗ್ರಾಮ ಪಂಚಾಯಿತಿ ದೊಡ್ಡ ಉಳ್ಳರ್ತಿಯ ಕಚೇರಿಯಲ್ಲಿ ಯಾವುದೇ ಕಡತ ತೆರೆದಿರುವುದಿಲ್ಲ ಮತ್ತು ನಿರ್ವಹಿಸಿರುವುದಿಲ್ಲ. ಆದ್ದರಿಂದ ದೂರುದಾರರು ಮಾಡಿರುವ ಆರೋಪವು ಅಸತ್ಯವಾಗಿದೆ. ದಿ:24/09/2016ರಂದು ನಾನು ಕರ್ತವ್ಯಕ್ಕೆ ಬೇಡರೆಡ್ಡಿ ಹಳ್ಳಿ ಗ್ರಾಮ ಪಂಚಾಯಿತಿಗೆ ಹೋಗಿ ಅಲ್ಲಿಯ ನೌಕರರಿಗೆ ತಿಂಗಳ ವೇತನವನ್ನು ಪಾವತಿಸಿ ಅಲ್ಲಿಂದ ಮಧ್ಯಾಹ್ನ 1-00 ಗಂಟೆಯ ಸಮಯಕ್ಕೆ ಚಳ್ಳಕೆರೆಗೆ ವಾಪಸ್ಸು ಬರುತ್ತಿರುವಾಗ ಎಸಿಬಿ ಪೋಲೀಸ್ ನಿರೀಕ್ಷಕರಾದ ಪ್ರಕಾಶ್‌ರವರು ಮತ್ತು ದೂರುದಾರರಾದ ರಾಜುರವರ ಸಹೋದರನಾದ ಹಾಲಿ ದೊಡ್ಡ ಉಳ್ಳರ್ತಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಗೋವಿಂದರವರು ಸೇರಿ, ನನ್ನನ್ನು ಚಳ್ಳಕೆರೆಯ ಬಳ್ಳಾರಿ ರಸ್ತೆಯಲ್ಲಿರುವ ಮಾರಮ್ಮನ ದೇವಸ್ಥಾನದ ಮುಂದೆ ನಿಂತು ರಸ್ತೆಗೆ ಅಡ್ಡ ಮಾಡಿ ನನ್ನ ಕಾರನ್ನು ನಿಲ್ಲಿಸಿ, ಏಕಾಏಕಿಯಾಗಿ ಎಸಿಬಿ ನಿರೀಕ್ಷಕರಾದ ಪ್ರಕಾಶರವರು ನೋಡಿ ನಿಮ್ಮ ಮೇಲೆ ಲಂಚದ ಆರೋಪದ ಕೇಸು ಇದೆ, ನೀವು ರೂ.15,000/- ಡಿಮ್ಯಾಂಡ್ ಮಾಡಿದ್ದೀರಿ, ಆದ್ದರಿಂದ ನಿಮ್ಮನ್ನು ಕರೆದುಕೊಂಡು ಹೋಗುತ್ತಿದ್ದೇವೆ ನಡೆಯಿರಿ, ಅಲ್ಲಿ ಎಲ್ಲಾ ವಿಚಾರಗಳನ್ನು ತಿಳಿಸುತ್ತೇವೆ ಎಂದು ತಾಲ್ಲೂಕು ಪಂಚಾಯಿತಿಯ ಚಳ್ಳಕೆರೆಗೆ ಕರೆದುಕೊಂಡು ಬಂದಾಗ ನನಗೆ ಇವರುಗಳು ಆರೋಪ ಮಾಡಿರುವ ಕೇಸ್‌ನ ಬಗ್ಗೆ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಟೇಬಲ್ ಮೇಲೆ ಹಣವನ್ನು ಇಟ್ಟಿರುವ ಬಗ್ಗೆ ತಿಳಿದಿರುತ್ತೆ ವಿನ: ಮುಂಚಿತವಾಗಿ ಏನೂ ತಿಳಿದಿರಲಿಲ್ಲ. ದೂರುದಾರ ರಾಜು ಮತ್ತು ಅವನ ಸಹೋದರ ಪಂಚಾಯಿತಿಯ ಅಧ್ಯಕ್ಷರಾದ ಗೋವಿಂದರವರು ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತ್ರಿಯ ಕೆಲಸವನ್ನು ಮಾಡಿಸಿದ್ದಕ್ಕೆ ಹಾಕಿರುವ ಬೋರ್ಡ್‌ಗಳಿಗೆ ಹಣ ನೀಡಿಲ್ಲ ಎಂದು ಸುಳ್ಳು ಆರೋಪವನ್ನು ಮಾಡಿದ್ದರು. ಆದರೆ, ಈ ವಿಷಯದಲ್ಲಿ ಕೆಲಸ ಮಾಡಿರುವ ಬಗ್ಗೆ ಆಗಲೀ ಗ್ರಾಮ ಪಂಚಾಯಿತಿವತಿಯಿಂದ ಬೋರ್ಡ್‌ಗಳನ್ನು ಸಲಕರಣೆಯನ್ನು ಮಾಡಿ ಎಂದು ಡಿಮ್ಯಾಂಡ್ ಆಗಲೀ ನೀಡಿರುವುದಿಲ್ಲ ಮತ್ತು ಇವರಿಗೆ ತಾಲ್ಲೂಕು ಪಂಚಾಯಿತಿವತಿಯಿಂದ ಆಗಲೀ, ಜಿಲ್ಲಾ ಪಂಚಾಯಿತಿವತಿಯಿಂದ ಆಗಲೀ ಬೋರ್ಡ್‌ಗಳನ್ನು ಸಲಕರಣೆ ಮಾಡಿ ಎಂದು ಆದೇಶವಾಗಲೀ ಇಲ್ಲದಿರುವಾಗ, ಮತ್ತು ಎಷ್ಟು ಬೋರ್ಡ್ ನೀಡಬೇಕೆಂದು ಎಲ್ಲಿಯೂ ಅದೇಶವಾಗಲೀ ಆಗಿರಲಿಲ್ಲ. ದೂರುದಾರ ಮತ್ತು ಆತನ ಸಹೋದರ ಅಧ್ಯಕ್ಷ ಪದವಿಯನ್ನು ದುರುಪಯೋಗ ಪಡಿಸಿಕೊಂಡು ನನಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಮೇಲೆ ಇಲ್ಲಸಲ್ಲದ ಸುಳ್ಳು ಕತೆಯನ್ನು ಕಟ್ಟಿ ಸುಳ್ಳು ಆರೋಪವನ್ನು ಮಾಡಿ ಸುಳ್ಳು ಕೇಸನ್ನು ದಾಖಲಿಸಿರುತ್ತಾರೆ. ತದನಂತರದ ದಿನಗಳಲ್ಲಿ ತಿಮ್ಮಾರೆಡ್ಡಿ ಎಂಬ ಪಿಡಿಓರವರನ್ನು ದೊಡ್ಡ ಉಳ್ಳಾರ್ತಿಗೆ ನಿಯೋಜನೆಯನ್ನು ಮಾಡಿಸಿಕೊಂಡು ತನ್ನ ಇಚ್ಚೆಯಂತೆ ಸರ್ಕಾರದ ನಡವಳಿಯನ್ನು ತನ್ನ ಇಚ್ಚೆಯಂತೆ ತಿದ್ದುಪಡಿ ಮಾಡಿಸಿಕೊಂಡು ನಮ್ಮ ಮೇಲೆ ಮಾಡಿರುವ ಆರೋಪವನ್ನು ಸಾಬೀತು ಪಡಿಸಲು ಮುಂದಾದಾಗ ಎಸಿಬಿ ಅಧಿಕಾರಿಗಳು ಕರ್ತವ್ಯಶೀಲರಾಗಿ ಎಲ್ಲಾ ದಾಖಲಾತಿಗಳನ್ನು ಮತ್ತು ಈ ತಿದ್ದುಪಡಿ ಮಾಡಿದ ನೌಕರರನ್ನು ತಾಲೀಮು ಮಾಡಿದಾಗ, ಅವರು ಮಾಡಿದ ತಪ್ಪು ಕಂಡುಬಂದಿರುತ್ತದೆ ವಿನಹ ನನ್ನಿಂದ ಯಾವುದೇ ತಪ್ಪುಗಳಾಗಲೀ ಮತ್ತು ಯಾವುದೇ ಹಣದ ಬೇಡಿಕೆಯನ್ನು ನಾನು ದೂರುದಾರನಿಗೆ ನೀಡಿರಲಿಲ್ಲ. ನನ್ನ ಮೇಲೆ ಮಾಡಿರುವ ಆರೋಪವು ಸತ್ಯಕ್ಕೆ ದೂರವಾದ ವಿಷಯವಾಗಿರುತ್ತದೆ. ನಾನು ನಡೆದ ಘಟನೆಯ ಬಗ್ಗೆ ಸ್ಥಳದಲ್ಲಿ ಲಿಖಿತವಾಗಿ ನೀಡಿರುತ್ತೇನೆ. ದೂರುದಾರರನ್ನು ಸ್ಪೆ. ಕೇಸ್ ಸಿ.ಸಿ.ನಂ. 07/2018ರಲ್ಲಿ ಪಿಡಬ್ಲು-1 ಎಂದು ವಿಚಾರಣೆ ಮಾಡಿದ್ದು, ಸದರಿ ಕೇಸಿನಲ್ಲಿ ಅವರು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ದೂರುದಾರರಿಂದ ನಾನು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ದೂರುದಾರರಿಗೆ

ಸಂಬಂಧಿಸಿದ ಕಡತ ನನ್ನ ಬಳಿ ಇರಲಿಲ್ಲ. ದೂರುದಾರರಿಗೆ ಸಂಬಂದಿಸಿದ ಕೆಲಸದ ಕಾರ್ಯ ಹಂಚಿಕೆ ನನಗೆ ಇರಲಿಲ್ಲ. ದೂರುದಾರರು ಲಂಚದ ಹಣವನ್ನು ನನ್ನ ಕೈಗೆ ನೀಡಿರುವುದಿಲ್ಲ. ದಾಳೀ ವೇಳೆಯಲ್ಲಿ ನನ್ನ ಕೈ ಕೆಂಪಾಗಿರುವುದಿಲ್ಲ, ದೂರುದಾರರೊಂದಿಗೆ ನಾನು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದಿಲ್ಲ ಮತು ಲಂಚದ ಹಣ ಪಡೆದಿರುವುದಿಲ್ಲ. ಲಂಚದ ಬೇಡಿಕೆ ವಾಯ್ಸ್ ರೆಕಾರ್ಡ್‌ನಲ್ಲಿ ಇರದೇ ಇದ್ದುದರಿಂದ ಉದ್ದೇಶ ಪೂರ್ವಕವಾಗಿ ದೂರುದಾರರು ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಲು ಮರೆತಿರುವುದಾಗಿ ಪಂಚನಾಮೆಯಲ್ಲಿ ಸುಳ್ಳು ದಾಖಲು ಮಾಡಲಾಗಿದೆ. ಆದ್ದರಿಂದ ಪ್ರಸ್ತುತ ತನಿಖೆಯಲ್ಲಿ ಅಮಾಯಕನಾದ ನನ್ನನ್ನು ಸಿಲುಕಿಸಲು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಚಿತ್ರದುರ್ಗ ಪ್ರಧಾನ ಜಿಲ್ಲಾ ನ್ಯಾಯಾಲಯದ ಸಿ.ಸಿ.ನಂ.07/2018ರಲ್ಲಿ ಇಲಾಖಾ ವಿಚಾರಣೆಯಲ್ಲಿ ಇರುವ ಆರೋಪಗಳ ಬಗ್ಗೆ ವಿಚಾರಣೆ ಪ್ರಗತಿಯಲ್ಲಿರುವುದರಿಂದ ಸರ್ಕಾರದ ಸುತ್ತೋಲೆ ಸಂ:ಉಂಅ (S-1) 38, SSR 58, dated:30/10/1958 ರನ್ವಯ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಅವಕಾಶ ಇರುವುದಿಲ್ಲ. ಇಲಾಖಾ ವಿಚಾರಣೆ ಮುಂದುವರಿಸಿದಲ್ಲಿ ಅಮಾಯಕನಾದ ನನಗೆ ತೊಂದರೆ ಹೊರತು ಆರೋಪ ಸಾಬೀತು ಪಡಿಸಲು ಸಾಕ್ಷಾಧಾರಗಳು ಇರುವುದಿಲ್ಲ. ಎ.ಸಿ.ಬಿ. ಅಧಿಕಾರಿಗಳು ನನ್ನ ವಿರುದ್ಧ ತರಾತುರಿಯಲ್ಲಿ ಸುಳ್ಳು ಮೊಕದ್ದಮೆಯನ್ನು ಸೃಷ್ಟಿಸಿರುತ್ತಾರೆ. ಕಾರಣ, ಪ್ರಸ್ತಾವಿತ ಕ್ರಮಗಳನ್ನು ಕೈ ಬಿಟ್ಟು ಕಡತವನ್ನು ಮುಕ್ತಾಯಗೊಳಿಸಲು ಕೋರಲಾಗಿದೆ" ಎಂದು ಸಮಜಾಯಿಷಿ ನೀಡಿರುತ್ತಾರೆ.

4) 1 ಮತ್ತು 2ನೇ ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, 2ನೇ ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. 1 ಮತ್ತು 2ನೇ ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. **(3ನೇ ಎದುರುದಾರರು ದಿನಾಂಕ:12/05/2021ರಂದು ಮೃತಪಟ್ಟಿರುತ್ತಾರೆ.)**

5) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 2ನೇ ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ 1 ಮತ್ತು 2ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6) ಅದಲ್ಲದೆ 1 ಮತ್ತು 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ

ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

7) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

K.N. Phanindra 20/4/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.